ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 5–5–2015

**ಪತ್ರಿಕಾ ಪ್ರಕಟಣೆ**

# ಕರ್ನಾಟಕದಲ್ಲಿ ಗಾಂಧೀ ಮೊದಲ ಹೆಜ್ಜೆ: ಮೇ 8 ರಂದು ಶತಮಾನೋತ್ಸವ ಸಮಾರಂಭ

**ಬೆಂಗಳೂರು ಮೇ 5 (ಕರ್ನಾಟಕ ವಾರ್ತೆ)**

ಗಾಂಧೀಜಿ ಅವರು ಕರ್ನಾಟಕಕ್ಕೆ ಮೊದಲ ಭೇಟಿ ನೀಡಿ ಮೇ 8 ಕ್ಕೆ ಒಂದು ಶತಮಾನವಾಗುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಗಾಂಧೀ ಮೊದಲ ಹೆಜ್ಜೆ: ಶತಮಾನೋತ್ಸವ ಸಂಭ್ರಮಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದೆಂದು ಯುವಜನ ಸಬಲೀಕರಣ ವಾರ್ತಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ನಾಗಾಂಬಿಕ ದೇವಿ ಅವರು ತಿಳಿಸಿದರು.

ಗಾಂಧೀ ಭವನದಲ್ಲಿಂದು ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಮೇ 8 ರಂದು ಬೆಳಗ್ಗೆ 11–00 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿರುವ ಈ ಶತಮಾನೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆಂದು ಅವರು ತಿಳಿಸಿದರು.

ಗಾಂಧೀಜಿಯವರ ವ್ಯಕ್ತಿ ವಿಚಾರಗಳನ್ನು ಜನಸಾಮಾನ್ಯರಲ್ಲಿ ವಿಶೇಷವಾಗಿ ಯುವ ಜನರಲ್ಲಿ ಬಿತ್ತಿ, ಮಾನವೀಯ ಮೌಲ್ಯಗಳು ನೆಲೆಸುವಂತೆ ಮಾಡಿ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಕಾರ್ಯಮಗ್ನರಾಗುವಂತೆ ಮಾಡುವ ಉದ್ದೇಶದಿಂದ ಶತಮಾನೋತ್ಸವ ಸಮಾರಂಭವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸಬಲೀಕರಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ಹಲವು ಸಂಘಗಳ ಸಹಯೋಗದೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಶತಮಾನೋತ್ಸವದ ಉದ್ಘಾಟನೆಗೂ ಮುಂಚೆ ಅಂದು ಬೆಳಗ್ಗೆ 9–00 ಗಂಟೆಗೆ ಬೆಂಗಳೂರು ರೈಲ್ವೆ ನಿಲ್ದಾಣದಿಂದ ಗಾಂಧೀಭವನದ ಮಾರ್ಗವಾಗಿ ಜ್ಞಾನಜ್ಯೋತಿ ಸಭಾಂಗಣದವರೆಗೆ ಸ್ವಾತಂತ್ರ್ಯ ಯೋಧರು, ಎನ್.ಎಸ್.ಎಸ್. ಕಾರ್ಯಕರ್ತರ ನೇತೃತ್ವದಲ್ಲಿ ಪಾದಯಾತ್ರೆಯನ್ನು ಏರ್ಪಡಿಸಲಾಗಿದೆ ಎಂದರು.

ಗಾಂಧೀಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಸ್ತುತಪಡಿಸಿರುವ ಗಾಂಧೀ ಚಿತ್ರ ಪ್ರದರ್ಶನವನ್ನು ಬೆಳಗ್ಗೆ 10–00 ಗಂಟೆಗೆ ಮೂಲ ಸೌಲಭ್ಯ ಅಭಿವೃದ್ಧಿ , ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಆರ್. ರೋಷನ್‌ಬೇಗ್ ಉದ್ಘಾಟಿಸುವರು. ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿರುವ ಶತಮಾನೋತ್ಸವ ಸಮಾರಂಭದಲ್ಲಿ 'ಕರ್ನಾಟಕದಲ್ಲಿ ಗಾಂಧೀ ಹೆಜ್ಜೆಗಳು' ಭೂಪಟವನ್ನು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್.ಕೆ. ಪಾಟೀಲ್ ಅವರು ಅನಾವರಣ ಮಾಡುವರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊರ ತಂದಿರುವ ಗಾಂಧೀ ವಿಶೇಷ ಪ್ರಕಟಣೆ ಮತ್ತು ಅಂಚೆ ಲಕೋಟೆಯನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಅವರು ಬಿಡುಗಡೆ ಮಾಡುವರೆಂದು ನಾಗಾಂಬಿಕಾದೇವಿ ಅವರು ಕಾರ್ಯಕ್ರಮದ ವಿವರವನ್ನು ನೀಡಿದರು.

ಗಾಂಧೀಜಿ ಅವರನ್ನು ಮೊದಲ ಬಾರಿಗೆ ಕರ್ನಾಟಕಕ್ಕೆ ಬರುವಂತೆ ಮಾಡಿದ ಡಿ.ವಿ. ಗುಂಡಪ್ಪ ಅವರ ದೇಶಾಭಿಮಾನವನ್ನು ನೆನಪು ಮಾಡಿಕೊಂಡ ಅವರು, ಮೊದಲ ಭೇಟಿಯಲ್ಲಿ ಗಾಂಧೀಜಿ ಅವರು ಅನಾವರಣ ಮಾಡಿದ್ದ ತಮ್ಮ ರಾಜಕೀಯ ಗುರು ಶ್ರೀ ಗೋಪಾಲಕೃಷ್ಣ ಗೋಖಲೆ ಅವರ ಭಾವಚಿತ್ರದ ಪ್ರತಿರೂಪವನ್ನು ಈ ಸಂದಭದಲ್ಲಿ ಅನಾವರಣಗೊಳಸಲಾಗುವುದೆಂದರು.

ಮೇ 8 ರಂದು ಈ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಮಾತ್ರವಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ 'ಕರ್ನಾಟಕದಲ್ಲಿ ಗಾಂಧೀ ಮೊದಲ ಹೆಜ್ಜೆ' ಶತಮಾನೋತ್ಸವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದಲ್ಲದೆ, ಶತಮಾನೋತ್ಸವ ಆಚರಣೆಯನ್ನು ಒಂದು ವರ್ಷ ಕಾಲ ಗಾಂಧೀಜಿ ಅವರ ನೆನಪಿನಲ್ಲಿ ಯುವಜನರನ್ನು ಪ್ರೇರೇಪಿಸುವ ಹಲವಾರು ಕಾರ್ಯಕ್ರಮಗಳನ್ನು ಶಾಲಾ ಕಾಲೇಜುಗಳಲ್ಲಿ ಆಚರಿಸಲಾಗುವುದೆಂದು ತಿಳಿಸಿದರು.

ವಕೀಲಿ ವೃತ್ತಿಗಾಗಿ ದಕ್ಷಿಣ ಆಫ್ರಿಕಾಗೆ ತೆರಳದ್ದ ಗಾಂಧೀಜಿ ಅವರು ಅಲ್ಲಿನ ಅನ್ಯಾಯದ ವಿರುದ್ಧ ಸಿಡಿದೆದ್ದು ಅಹಿಂಸೆಯ ಯಶಸ್ವಿ ಪ್ರಯೋಗ ಮಾಡಿ 21 ವರ್ಷಗಳ ನಂತರ 9-1-1915 ರಂದು ಭಾರತಕ್ಕೆ ಹಿಂದಿರುಗಿದರು. ದಕ್ಷಿಣ ಆಫ್ರಿಕಾದಿಂದ ಮರಳ ಭಾರತಕ್ಕೆ ಆಗಮಿಸಿ ಜನವರಿ 9 ಕ್ಕೆ ಶತಮಾನವಾದ ಹಿನ್ನೆಲೆಯಲ್ಲಿ ರಾಷ್ಟ್ರವ್ಯಾಪಿ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿರುವ ರೀತಿಯಲ್ಲಿಯೇ ಈ ಶತಮಾನೋತ್ಸವವನ್ನು ಕರ್ನಾಟಕ ರಾಜ್ಯದಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುವುದೆಂದರು.

ಪತ್ರಿಕಾಗೋಷ್ಠಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಎನ್.ಆರ್. ವಿಶುಕುಮಾರ್, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ರಂಗಶಾಮಯ್ಯ, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ವೊಡೆಪಿಕೃಷ್ಣ ಹಾಗೂ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪಲ್ಲವಿ/ಪೂರ್ಣಿಮ/ಕೆಎಂ

## ಕೆ.ಒ.ಎಸ್. ಪರೀಕ್ಷಾ ಫಲಿತಾಂಶ

**ಬೆಂಗಳೂರು ಮೇ 5 (ಕರ್ನಾಟಕ ವಾರ್ತೆ)**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಮಾರ್ಚ್/ಏಪ್ರಿಲ್ –2015 ರ ಮಾಹೆಯಲ್ಲಿ ನಡೆಸಿದ ಕರ್ನಾಟಕ ಮುಕ್ತ ಶಾಲೆ ಕೆ–ಒ.ಎಸ್. ಪರೀಕ್ಷೆಯ ಫಲಿತಾಂಶವನ್ನು ಮೇ 8 ರಂದು ಬೆಳಿಗ್ಗೆ 11–00 ಗಂಟೆಗೆ ರಾಜ್ಯದ ಎಲ್ಲಾ ಕಲಿಕಾ ಕೇಂದ್ರದಲ್ಲಿ ಪ್ರಕಟಿಸಲಾಗುವುದು ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.**

**ಪಲ್ಲವಿ/ಬಾಬು/ಕೆಎಂ**

# K.O.S. Examination Results

**Bangalore, May 5 (Karanataka Information)**

**Results of Karnataka Open School-KOS Examination conducted by Karnataka Education Examination Board, Bangalore during March/April-2015 have been sent to all KOS study centres for announcement the results on May 8th at 11.00 A.M. at the respective KOS study Centres said Director (Other Exams) Karnataka Secondary Education Examination Board, Bangalore.**

## Inviting application for 3 Year Diploma course in Handloom and Textile Technology

**Bangalore, May 5 (Karanataka Information)**

Application are invited for 3 year Diploma Course in Handloom and Textile Technology for the academic year 2015-16 from the eligible candidates. The eligibility for submission of application is pass in SSLC or equivalent examination with English as subject of study. Aggregate of marks obtained in the qualifying examination shall be the basis for determination of merit.

As per the guidelines the students will be paid a monthly stipend upto Rs. 1200/- during the coures of study, Hostel facilites are alse made available on payment.

Age limit for admission is between 15 to 23 years for general candidates and 15 to 25 years for SC/ST candidates as on 01-07-2014. A total of 42 candidates will be selected to study the above course in the following institutions.

| | | |
|---|---|---|
| 1) | Karnataka Handloom Technology Institute, Narasapura Gadag (karnataka) | - 22 Candidates |
| 2) | Indian Institute of Handloom Technology, Salem (TamilNadu) | - 15 Candidates |
| 3) | S.P.K.M Indian Institute of Handloom Technology, Venkatagiri (Andhra Pradesh) | - 03 Candidates |
| 4) | Indian Institute of Handloom Technology, Kannur (Kerala) | - 02 Candidates |
| | **Total** | **-42 Candidtaes.** |

Merited candidates shall be called for admission through counselling.

Interested candidates may collect the application forms free of cost from this office (Ph:22485690 or 22278223) or from the Principal, Karnataka Handloom Technology Institute, Narasapur, Gadag-582102 (Ph:08372-218696) or the Joint Director /Deputy Director / Assistant Director, Handloom and Textiles in the respective Districts.

Completely filled applications are required to be sent to **"The Principal, Karnataka Handloom Technology Institute, Narasapur, Gadag-582102"** The last date for receipt of applications is 10-06-2015.

pallavi/babu/km

---

# ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ 03 ವರ್ಷಗಳ ಡಿಪ್ಲೋಮಾ ಕೋರ್ಸ್‍ಗೆ ಅರ್ಜಿಗಳ ಆಹ್ವಾನ

**ಬೆಂಗಳೂರು ಮೇ 5 (ಕರ್ನಾಟಕ ವಾರ್ತೆ)**

2015-16 ನೇ ಸಾಲಿನ ಶೈಕ್ಷಣಿಕ ಸಾಲಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್ ಕಲಿಕೆಗಾಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು 1200/- ರವರೆಗೆ ಶಿಷ್ಯವೇತನ ನೀಡಲಾಗುವುದು ಹಾಗೂ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಎಸ್‍ಎಸ್‍ಎಲ್‍ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲಿಷ್‍ನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ:01-07-2014 ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು 15 ರಿಂದ 23 ರ ವಯೋಮಿತಿಯಲ್ಲಿರಬೇಕು ಹಾಗೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಅಭ್ಯರ್ಥಿಗಳು 15 ರಿಂದ 25 ರ ವಯೋಮಿತಿಯಲ್ಲಿರಬೇಕು. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೋಡೀಕೃತ ಅಂಕಗಳು ಮೆರಿಟ್ ಲೆಕ್ಕಾಚಾರಕ್ಕೆ ಆಧಾರವಾಗಿರುತ್ತವೆ.

**ಮೇಲ್ಕಂಡ ಡಿಪ್ಲೋಮಾ ಕೋರ್ಸ್‍ಗಾಗಿ:**

1) ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ (ಕರ್ನಾಟಕ) -22 ಅಭ್ಯರ್ಥಿಗಳು
2) ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ, (ತಮಿಳುನಾಡು) -15 ಅಭ್ಯರ್ಥಿಗಳು
3) ಎಸ್.ಪಿ.ಕೆ.ಎಂ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ (ನೆಲ್ಲೂರು, ಆಂಧ್ರಪ್ರದೇಶ) -03 ಅಭ್ಯರ್ಥಿಗಳು

4) ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು (ಕೇರಳ) -02 ಅಭ್ಯರ್ಥಿಗಳು

**ಒಟ್ಟು -42 ಅಭ್ಯರ್ಥಿಗಳು**

ಬೇಕಾಗಿರುತ್ತಾರೆ.

ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಿಲಿಂಗ್‌ಗಾಗಿ ಕರೆಯಲಾಗುವುದು. ಆಸಕ್ತಿ ಇರುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ಫಾರಂಗಳಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ:22485690/ 22271628 ಅಥವಾ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ (ದೂರವಾಣಿ ಸಂಖ್ಯೆ: 08372-218696) ಅಥವಾ ಆಯಾ ಜಿಲ್ಲೆಯ ಜಂಟಿ/ ಉಪ/ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್ ಇವರುಗಳನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪುರ, ಗದಗ – 582102 ಇವರಿಗೆ ಸಲ್ಲಿಸಲು ಕೊನೆಯ ದಿನಾಂಕ:10-06-2015.

ಪಲ್ಲವಿ/ಬಾಬು/ಕೆಎಂ

## ಸಾರಿಗೆ ಅದಾಲತ್

**ಬೆಂಗಳೂರು ಮೇ 5 (ಕರ್ನಾಟಕ ವಾರ್ತೆ)**

ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ಕೇಂದ್ರ) 2 ನೇ ಮಹಡಿ, ಬಿ.ಡಿ.ಎ. ವಾಣಿಜ್ಯ ಸಂಕೀರ್ಣ, ಕೋರಮಂಗಲ, ಬೆಂಗಳೂರು -560 034 ಇಲ್ಲಿ ಸಾರ್ವಜನಿಕರ ಕುಂದು ಕೊರತೆ ಹಾಗೂ ಸಲಹೆಗಳನ್ನು ಪಡೆಯುವ ಸಲುವಾಗಿ 8-5-2015 ರಂದು ಮಧ್ಯಾಹ್ನ 3-00 ಗಂಟೆಗೆ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ. ಇದರಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸುವರು. ಈ ವ್ಯಾಪ್ತಿಯ ಸಾರ್ವಜನಿಕರು ಇದರ ಪ್ರಯೋಜನ ಪಡೆಯಬಹುದಾಗಿದೆ.

ಪಲ್ಲವಿ/ಕೆಎಂ

## ಅವಧಿ ವಿಸ್ತರಣೆ

**ಬೆಂಗಳೂರು ಮೇ 5 (ಕರ್ನಾಟಕ ವಾರ್ತೆ)**

**ರಾಜ್ಯದಲ್ಲಿ ಖಾಲಿ ಇರುವ ಸಮೂಹ ಸಂಪನ್ಮೂಲ ವ್ಯಕ್ತಿ ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಹುದ್ದೆಗಳನ್ನು ಭರ್ತಿಮಾಡಲು ಸೇವೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಪ್ರೌಢಶಾಲಾ ಶಿಕ್ಷಕರುಗಳಿಂದ ಕರೆಯಲಾಗಿದ್ದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ.**

ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಬಹುದು ಅಥವಾ ಇಲಾಖಾ ವೆಬ್‌ಸೈಟ್ **www.ssakarnataka.gov.in** ಅನ್ನು ವೀಕ್ಷಿಸಬಹುದಾಗಿದೆ.

ಬಾಬು:ಜಿಪಿಆರ್.